**ದಿನಾಂಕಃ 14.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪಿರ್ಯಾದಿದಾರರ ಪರ ಶ್ರೀ. ಬಿ.ಎಂ.ಎನ್. ವಕೀಲರಿಂದಃ**

ನಾನು 2018-19 ನೇ ಸಾಲಿನ ನನ್ನ ಆದಾಯ ತೆರಿಗೆ ಪಾವತಿಸಿದ ಸ್ವೀಕೃತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ನಾನು 2019-20 ನೇ ಸಾಲಿನ ನನ್ನ ಆದಾಯ ತೆರಿಗೆ ಪಾವತಿಸಿದ ಸ್ವೀಕೃತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ನಾನು 2020-21 ನೇ ಸಾಲಿನ ನನ್ನ ಆದಾಯ ತೆರಿಗೆ ಪಾವತಿಸಿದ ಸ್ವೀಕೃತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಅದೇ ರೀತಿ ನಾನು ಕಿರುಗಾವಲು ಗ್ರಾಮದ ಸರ್ವೆ ನಂ.267 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-10 ಎಂದು ಗುರುತಿಲಾಯಿತು. ಆರೋಪಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ. ಎಂ.ಎ.ಕೆ. ವಕೀಲರಿಂದಃ**

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನನಗೆ ಇಂಗ್ಲಿಷ್ ಭಾಷೆ ಓದಲು ಬರೆಯಲು ಅಷ್ಟಾಗಿ ಬರುವುದಿಲ್ಲ. ನಾನು ಪ್ರಥಮ ಪಿ.ಯು.ಸಿ ಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ನನ್ನ ದೂರಿನಲ್ಲಿ ಹೇಳಿರುವಂತೆ ನಾನು ಮೈಸೂರು ಜಿಲ್ಲೆಯ ಬನ್ನೂರು ಪಟ್ಟಣದ ವಾಸಿ ಇರುತ್ತೇನೆ ಎಂದರೆ ಸರಿ. ನಾನು ನನ್ನ ವಕೀಲರ ಮೂಲಕ ಆರೋಪಿಗೆ ಕಳುಹಿಸಿದ ವಕೀಲರ ನೋಟಿಸ್ ನಲ್ಲಿ ನನ್ನ ಮತ್ತು ಆರೋಪಿಯ ನಡುವಿನ ಪರಿಚಯ ಮತ್ತು ಸಂಬಂಧದ ಬಗ್ಗೆ ವಿವರಿಸಿರುವುದಿಲ್ಲ ಎಂದರೆ ಸರಿ. ನಾನು, ನಾನು ಹೇಳುವಂತೆ ಆರೋಪಿಗೆ ರೂ.6,00,000/- ಮೊತ್ತವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಆ ರೀತಿಯಾಗಿ ನಾನು ರೂ.6,00,000/ ಹಣವನ್ನು ಆರೋಪಿಗೆ ಯಾವ ಯಾವ ಮುಖಬೆಲೆಯ ನೋಟಿನಂತೆ ಕೊಟ್ಟಿರುತ್ತೇನೆಂದು ನಾನು ನನ್ನ ವಕೀಲ ನೋಟಿಸ್ ನಲ್ಲಿ ತಿಳಿಸಿರುವುದಿಲ್ಲ. ನಾನು ಆರೋಪಿಗೆ ದಿನಾಂಕ.09.02.2022 ರಂದು ಕಳುಹಿಸಿದ ವಕೀಲರ ನೋಟಿಸ್ ನಲ್ಲಿ ಇರುವ ಸಂಗತಿಗಳನ್ನು ಒಂದು ಬಾರಿ ಮಾತ್ರ ನನ್ನ ವಕೀಲರ ಮೂಲಕ ತಿಳಿದುಕೊಂಡಿರುತ್ತೇನೆ. ಆರೋಪಿಯು ಕೊಟ್ಟಂತಹ ಪ್ರತ್ಯುತ್ತರ ನೋಟಿಸ್ ನಲ್ಲಿರುವ ಒಕ್ಕಣೆಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ದಿನಾಂಕ.09.02.2022 ರಂದು ನಾನು ಆರೋಪಿಗೆ ಕಳುಹಿಸಿದ ನೋಟಿಸ್ ನಲ್ಲಿರುವ ಸಂಗತಿಗಳಿಗೂ ಮತ್ತು ನನ್ನ ದೂರಿನ್ನಲಿರುವ ಸಂಗತಿಗಳಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ನನಗೆ ಮತ್ತು ಆರೋಪಿಗೂ ಯಾವುದೇ ಪರಿಚಯ ಇರುವುದಿಲ್ಲ ನಾನು ಮೊಟ್ಟಮೊದಲ ಬಾರಿಗೆ ಆರೋಪಿಯನ್ನು ಈ ನ್ಯಾಯಾಯಲಯದಲ್ಲೇ ನೋಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಆರೋಪಿಯು ಕಳೆದ 10 ವರ್ಷಗಳಿಂದ ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ. ಬಿ.ಟಿ.ಗುರುಸ್ವಾಮಿ ಎನ್ನುವವರು ನನ್ನ ದೂರದ ಸಂಬಂಧಿ ಮತ್ತು ಪಕ್ಕದ ಮನೆಯವರಿದ್ದು, ಅವರು ಕೊಡಗು ಜಿಲ್ಲೆಯ ವಿರಾಜಪೇಟೆ ಮೂಲದಿಂದ ವಿವಾಹ ಆಗಿದ್ದು, ಆರೋಪಿಯು ಕೂಡ ಸದರಿ ಬಿ.ಟಿ.ಗುರುಸ್ವಾಮಿಯವರ ಪತ್ನಿಯ ಊರಿನವರಿದ್ದು, ಅವರ ಮುಖಾಂತರ ನನಗೆ ಆರೋಪಿಯ ಪರಿಚಯವಾಗಿರುತ್ತದೆ.

ನಾನು ಆರೋಪಿಗೆ ದಿನಾಂಕ.09.10.2021 ರ ಶನಿವಾರದಂದು ಬನ್ನೂರಿನ ನನ್ನ ಮನೆಯಲ್ಲೇ ಸುಮಾರು ರಾತ್ರಿ 8.30 ರಿಂದ 9.00 ಗಂಟೆಯ ನಡುವೆ ಆರೋಪಿಗೆ ರೂ.6,00,000/- ಗಳನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ನಾನು ವಾಸ ಇರುವ ಬನ್ನೂರು ಪಟ್ಟಣಕ್ಕೂ ಮತ್ತು ಆರೋಪಿ ವಾಸ ಇರುವ ವಿರಾಜಪೇಟೆ ಪಟ್ಟಣಕ್ಕೂ ಸುಮಾರು 140 ಕಿ.ಮೀ. ಅಂತರ ಇರುತ್ತದೆ ಎಂದರೆ ಸರಿ. ಆರೋಪಿಯು ಮೊದಲ ಬಾರಿ ನ್ಯಾಯಾಲಯಕ್ಕೆ ಬಂದಾಗ ನಾನು ನನ್ನ ಮೊಬೈಲ್ ನಲ್ಲಿ ಅವರ ಫೋಟೋವನ್ನು ತೆಗೆದು ಸದರಿ ಫೋಟೋವನ್ನು ಬಳಸಿಕೊಂಡು ನಾನು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ಫೋಟೋವನ್ನು ನ್ಯಾಯಾಲಯದಲ್ಲಿ ತೆಗೆದ ದಿನದಂದು ನನ್ನೊಂದಿಗೆ ನನ್ನ ಗಂಡ ಕೂಡ ಇದ್ದರೂ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಆ ರೀತಿಯಾಗಿ ಆರೋಪಿಯ ಯಾವುದೇ ಫೋಟೋವನ್ನು ತೆಗೆದಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಹೇಳುವಂತೆ ನಾನು ಆರೋಪಿಗೆ ದಿನಾಂಕ. 09.10.2021 ರಂದು ರೂ.6,00,000/- ಗಳನ್ನು ಕೊಟ್ಟಿರುತ್ತೇನೆ ಎನ್ನಲಾದ ದಿನಾಂಕದ ಪೂರ್ವದಲ್ಲೇ ಆರೋಪಿಯು ತನ್ನ ಚೆಕ್ ಪುಸ್ತಕ ಕಳೆದುಕೊಂಡಿರುವ ಬಗ್ಗೆ ಪೋಲೀಸರಿಗೆ ದೂರು ಕೊಟ್ಟಿದ್ದು ಮತ್ತು ಸದರಿ ವಿಚಾರವನ್ನು ಆರೋಪಿಯು ತನ್ನ ಪ್ರತ್ಯುತ್ತರ ನೋಟಿಸ್ ನಲ್ಲಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಯು ತನ್ನ ಪ್ರತ್ಯುತ್ತರ ನೋಟಿಸ್ ನಲ್ಲಿ ತನ್ನ ಚೆಕ್ ಬುಕ್ ಕಳೆದುಹೋದ ಬಗ್ಗೆ ಮತ್ತು ದೂರು ಕೊಟ್ಟ ಬಗ್ಗೆ ಉಲ್ಲೇಖಿಸಿದ್ದರೂ ಸಹ ನಾನು ಸದರಿ ವಿಚಾರದ ಬಗ್ಗೆ ನನ್ನ ದೂರಿನಲ್ಲಿ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ನಾನು ನಿಪಿ-1 ರ ಚೆಕ್ ನ್ನು ನಾನು ಖಾತೆ ಹೊಂದಿರುವ ಕಾವೇರಿ ಗ್ರಾಮೀಣ ಬ್ಯಾಂಕ್, ಬನ್ನೂರು ಸಂತೇಮಾಳ ಶಾಖೆಗೆ ನಗದೀಕರಣಗೊಳಿಸಲು ಸಲ್ಲಿಸಿದಾಗ ಸದರಿ ಶಾಖೆಯವರು ನನಗೆ ಕೊಟ್ಟ ನಿಪಿ-2 ಹಿಂಬರಹದಲ್ಲಿ ಸದರಿ ಚೆಕ್ ಖಾತೆಯ್ಲುಲಿ ಸಾಕಷ್ಟು ಬಾಕಿ ಮೊತ್ತ ಇರುವುದಿಲ್ಲ ಮತ್ತು ಆರೋಪಿಯ ಸಹಿಯಲ್ಲಿ ವ್ಯತ್ಯಾಸ ಇರುವುದಾಗಿ ಅಮಾನ್ಯ ಮಾಡಿರುವುದಾಗಿ ತಿಳಿಸಲಾಗಿದೆ ಎಂದರೆ ಸರಿ.

ದಿನಾಂಕ.09.10.2021 ರಂದು ನಾನು ಆರೋಪಿಗೆ ರೂ.6,00,000/- ಗಳನ್ನು ನಗದಾಗಿ ಕೊಟ್ಟಿರುತ್ತೇನೆ ಎಂದು ಹೇಳುವ ದಿನದಂದು ಸದರಿ ರೂ.6,00,000/- ನಗದು ನನ್ನ ಬಳಿ ಯಾವ ಮೂಲದಿಂದ ಬಂತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ.

ಮುಂದುವರೆದ ರ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**( ಸಚಿನ್.ಹೆಚ್.ಆರ್)**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ತಿ.ನರಸೀಪುರ.